**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ 04/ಇಸಿಎಸ್(2)/2021-22

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ:15.11.2021.

**ಜ್ಞಾಪನ**

ವಿಷಯ: ಅಕ್ಟೋಬರ್/ನವೆಂಬರ್ 2021 ರ ಡಿಪ್ಲೊಮಾ ಸೆಮಿಸ್ಟರ್ ಥಿಯರಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ವಿವಿಧ ಮೌಲ್ಯಮಾಪನ ಕೇಂದ್ರಗಳಲ್ಲಿ ಜರುಗಿಸುವ ಬಗ್ಗೆ

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಇಡಿ 158 ಟಿಪಿಇ 2010 ದಿ: 7-6-2010
2) ಸರ್ಕಾರದ ಆದೇಶ ಸಂಖ್ಯೆ: ಇಡಿ 323 ಟಿಪಿಇ 2010 ದಿ: 23-12-2010
3) ಏಕ ಕಡತ ಸಂಖ್ಯೆ: ಬಿಟಿಇ 11/ಇಸಿಎಸ್(2)/2020 ದಿ:15-06-2020
4) ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ 04/ಇಸಿಎಸ್(2)/2021-22 ದಿ:10-11-2021
5) ಮಾನ್ಯ ಆಯುಕ್ತರವರ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ 04/ಇಸಿಎಸ್(1)/2021 ದಿ:08-10-2021
6) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ 04/ಇಸಿಎಸ್(2)/2021-22 ದಿ:30-10-2021
7) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ 04/ಇಸಿಎಸ್(1)/2021 ದಿ:12-10-2021
8) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ 04/ಇಸಿಎಸ್(2)/2021-22 ದಿ:10-11-2021
9) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ 04/ಇಸಿಎಸ್(2)/2021-22 ದಿ: 10-11-2021
10) ಸರ್ಕಾರದ ಆದೇಶ ಸಂಖ್ಯೆ: ಇಡಿ 57 ಟಿಪಿಇ 2010 ದಿ: 17-04-2015

* * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1), (2) ಮತ್ತು (3) ರ ಸರ್ಕಾರದ ಆದೇಶಗಳನ್ವಯ ತಾಂತ್ರಿಕ ಪರೀಕ್ಷಾ ಮಂಡಳಿಯ ಅಕ್ಟೋಬರ್/ನವೆಂಬರ್ 2021 ರ ಡಿಪ್ಲೊಮಾ ಸೆಮಿಸ್ಟರ್ ಥಿಯರಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು COVID-19 Pandemic ಹಿನ್ನೆಲೆಯಲ್ಲಿ 15 ವಿವಿಧ ವಲಯಗಳ ನೋಡಲ್ ಮೌಲ್ಯಮಾಪನ ಕೇಂದ್ರಗಳಲ್ಲಿ ದಿನಾಂಕ: 19-11-2021 ರಿಂದ ನಡೆಸಲು ಕ್ರಮಕೈಗೊಳ್ಳಲಾಗಿದ್ದು ಉಲ್ಲೇಖ(4)ರ ಸುತ್ತೋಲೆಯಲ್ಲಿ ನೀಡಿರುವ ಕಾರ್ಯಸಾಧುವಾದ "ಪ್ರಮಾಣಿತ ಕಾರ್ಯಚರಣಾ ವಿಧಾನ" ಗಳನ್ನು (Standard Operating Procedure) ಪಾಲಿಸಿ ಕೊರೊನಾ ಸೋಂಕು ಹರಡದಂತೆ ಮುನ್ನೆಚ್ಚರಿಕಾ ಕ್ರಮವಹಿಸಿ ಮೌಲ್ಯಮಾಪನ ಕಾರ್ಯವನ್ನು ಯಶಸ್ವಿಯಾಗಿ ನಡೆಸಲು ತಿಳಿಸಲಾಗಿದೆ.

ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇವರಿಂದ ನಿಯೋಜಿಸಲ್ಪಟ್ಟ ಉಪನ್ಯಾಸಕರ ಪಟ್ಟಿಯನ್ನು ಬಿಟಿಇ ಲಿಂಕ್ಸ್ ಆನ್ ಲೈನ್ ವೆಬ್ ಪೋರ್ಟಲ್‌ನಿಂದ ಪಡೆದು ಮೌಲ್ಯಮಾಪನ ದಿನಾಂಕವನ್ನು ಮೌಲ್ಯಮಾಪಕರ ಗಮನಕ್ಕೆ ತರಲು ನಿಗದಿಪಡಿಸಲಾದ ದಿನಾಂಕಗಳಂದು ಮೌಲ್ಯಮಾಪನಕ್ಕೆ ತಪ್ಪದೇ ಹಾಜರಾಗಲು ಸೂಚಿಸಿ ಕಡ್ಡಾಯವಾಗಿ ಕಾರ್ಯ ನಿಯುಕ್ತಿಗೊಳಿಸಲು ಎಲ್ಲಾ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ ಈ ಮೂಲಕ ಸೂಚಿಸಲಾಗಿದೆ.

ಪ್ರತಿ ಮೌಲ್ಯಮಾಪನ ಕೇಂದ್ರಗಳ ವಿವರ/ವಿಳಾಸಗಳನ್ನು ಈ ಕೆಳಗೆ ನೀಡಲಾಗಿದೆ.

| ವಲಯ | ಮೌಲ್ಯಮಾಪನ ನೋಡಲ್ ಕೇಂದ್ರ (ಉತ್ತರ ಪತ್ರಿಕೆಗಳ ಸಂಖ್ಯೆ) | ಮೌಲ್ಯಮಾಪಕರ ಸಂಖ್ಯೆ | ವಿಷಯ/ಬೋರ್ಡ್ | ಮೌಲ್ಯಮಾಪನ ಪ್ರಾರಂಭದ ದಿನಾಂಕ | ಮೌಲ್ಯಮಾಪನ ಮುಕ್ತಾಯದ ದಿನಾಂಕ |
|---|---|---|---|---|---|
| I | ಎಸ್ ಜೆ (ಸರ್ಕಾರಿ) ಪಾಲಿಟೆಕ್ನಿಕ್, ಬೆಂಗಳೂರು (65129) | 560 | ADFT, AR, AN, AT, CD, CE, CH, CN, CP,CR, CS & IS,E&C, EI, EE, EN, IC, ID, LI, LT, HP, MC,ME, MI, MN,MT,MY,PT,TX, SR, WS, SC, ENG, KAN & Misc. | 19/11/2021 | 26/11/2021 * |
| II | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ (11453) | 110 | AT, CS & IS ,CE, CP, E&C, EE, ME, MN, SCIENCE, ENG, KAN& Misc. | 19/11/2021 | 26/11/2021 * |
| III | ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು (19416) | 165 | AT, CS & IS ,CE, E&C, EE, ME, SCIENCE, ENG, KAN & Misc. | 19/11/2021 | 26/11/2021 * |

| | | | | | |
|---|---|---|---|---|---|
| IV | ಸರ್ಕಾರಿ ಪಾಲಿಟೆಕ್ನಿಕ್.ವಿಜಯಪುರ (13691) | 120 | AT, CS & IS ,CE, E&C, EE, ME, SCIENCE,ENG, KAN & Misc. | 19/11/2021 | 26/11/2021 * |
| V | ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ (24530) | 210 | AG, AR, AT, CP, CS & IS CE, E&C, EE, ME,MC, MY, SC, ENG, KAN & Misc. | 19/11/2021 | 26/11/2021 * |
| VI | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ (30935) | 265 | ADFT, AR, AT, CP, CS & IS, CE, E&C, EE, EI, ENV, ME, MC, SC,TD,TX ENG, KAN & Misc. | 19/11/2021 | 26/11/2021 * |
| VII | ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ (20180) | 170 | ADFT, AR, AT, CS & IS , CE, E&C, EE, EI, ENV,ME, MC, MT, DS, SC, ENG, KAN & Misc. | 19/11/2021 | 26/11/2021 * |
| VIII | ಸರ್ಕಾರಿ ಪಾಲಿಟೆಕ್ನಿಕ್.ಕಲಬುರಗಿ (21314) | 185 | ADFT, AR, AT, CS & IS, CE, E&C, EE, ME, SC, ENG , KAN & Misc. | 19/11/2021 | 26/11/2021 * |
| IX | ಶ್ರೀಮತಿಎಲ್.ವಿ.(ಸರ್ಕಾರಿ) ಪಾಲಿಟೆಕ್ನಿಕ್, ಹಾಸನ (12592) | 110 | ADFT, AT, CP, CS & IS, CE, E&C, EE, LI, ME, MY, SC,ENG, KAN & Misc. | 19/11/2021 | 26/11/2021 |
| X | ಡಿ.ಆರ್.ಆರ್.(ಸರ್ಕಾರಿ) ಪಾಲಿಟೆಕ್ನಿಕ್, ದಾವಣಗೆರೆ (21713) | 180 | ADFT, AT, CP, CS & IS, CE, E&C, EE, ME, TX, SC, ENG, KAN & Misc. | 19/11/2021 | 26/11/2021 * |
| XI | ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು (10188) | 85 | CS & IS ,CE, E&C, EE, ME, MN, SCI, ENG, KAN & Misc. | 19/11/2021 | 26/11/2021 * |
| XII | ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್, ಮಂಗಳೂರು (19862) | 170 | ADFT, AN, AT, CH, CP, CS & IS CE, E&C, EE, LI, ME, PO, PT, SC, ENG, KAN & Misc. | 19/11/2021 | 26/11/2021 * |
| XIII | ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ (9265) | 80 | AT, CP, CR, CS & IS ,CE, E&C, EE, ME, SC, ENG, KAN &Misc. | 19/11/2021 | 26/11/2021 * |
| XIV | ಸಿ.ಪಿ.ಸಿ. (ಸರ್ಕಾರಿ) ಪಾಲಿಟೆಕ್ನಿಕ್, ಮೈಸೂರು (28081) | 235 | ADFT, AR, AT, CP, CS & IS, CE, E&C, EE, ID, ME, MC, MY, SC, ENG, KAN & Misc. | 19/11/2021 | 26/11/2021 * |
| XV | ವಿ.ಐ.ಎಸ್.ಎಸ್.ಜೆ (ಸ) ಪಾಲಿಟೆಕ್ನಿಕ್, ಭದ್ರಾವತಿ (11869) | 100 | ADFT, CP, CS & IS CE, E&C, EE, ME, MT, SC, ENG, KAN & Misc. | 19/11/2021 | 26/11/2021 * |

*<u>ಸೂಚನೆ</u>

1) ದಿನಾಂಕ: 21.11.2021 ರಂದು ನಡೆಯುವ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ಮತ ಚಲಾಯಿಸಲಿರುವ ಮೌಲ್ಯಮಾಪಕರು ಶಿಬಿರಾಧಿಕಾರಿಗಳು/ಶಿಬಿರ ಮೇಲ್ವಿಚಾರಕರಿಂದ ಸೀಮಿತ ಅವಧಿಗೆ ಪೂರ್ವಾನುಮತಿ ಪಡೆದು ಮತದಾನದಲ್ಲಿ ಭಾಗವಹಿಸುವುದು.
2) ದಿನಾಂಕ: 22.11.2021 ರಂದು ಕನಕದಾಸ ಜಯಂತಿ ಆಚರಣೆ ಹಿನ್ನೆಲೆಯಲ್ಲಿ ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗದ ಅಧಿಕಾರಿಗಳು/ಮೌಲ್ಯಮಾಪಕರು ಆ ದಿನದ ದಿನಭತ್ಯೆಗೆ ಅರ್ಹರಿರುವುದಿಲ್ಲ.

(<u>ವಿ.ಸೂ:</u> ಮೇಲ್ಕಾಣಿಸಿದ ವಿಷಯಗಳ ಹೊರತು ಇತರೆ (Misc.) ವಿಷಯ/ಬೋರ್ಡ್‌ಗಳ ಉತ್ತರ ಪತ್ರಿಕೆಗಳು ಶಿಬಿರದಲ್ಲಿ ಕಂಡು ಬಂದಲ್ಲಿ ಶಿಬಿರಾಧಿಕಾರಿಗಳು, ಕಾರ್ಯದರ್ಶಿಯವರಿಗೆ ಮಾಹಿತಿ ನೀಡಿ ತಮ್ಮ ಹಂತದಲ್ಲಿ ಸಂಬಂಧಿತ ಬೋರ್ಡ್‌ನಲ್ಲಿ ಮೌಲ್ಯಮಾಪನ ಮಾಡಿಸತಕ್ಕದ್ದು.)

ಅಕ್ಟೋಬರ್/ನವೆಂಬರ್ 2021 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ವಿವಿಧ ಮೌಲ್ಯಮಾಪನ ಕೇಂದ್ರಗಳಿಗೆ ಉಲ್ಲೇಖ (5)ರ ಆಯುಕ್ತರ ಜ್ಞಾಪನದಲ್ಲಿ ನೋಡಲ್ ಅಧಿಕಾರಿ, ಶಿಬಿರಾಧಿಕಾರಿ, ಸಹಾಯಕ ಶಿಬಿರಾಧಿಕಾರಿಗಳನ್ನು ನಿಯೋಜಿಸಲಾಗಿದೆ. ಉಲ್ಲೇಖ (6) ರ ಜ್ಞಾಪನದಲ್ಲಿ ವಿವಿಧ ವಿಷಯ ಸಮಿತಿಗಳ ಮೇಲ್ವಿಚಾರಕರುಗಳನ್ನು ನೇಮಿಸಲಾಗಿದೆ. ಸದರಿ ಅಧಿಕಾರಿಗಳು ತಮಗೆ ನೀಡಲಾದ ಕಾರ್ಯವನ್ನು ಉಲ್ಲೇಖ (7)ರ ಜ್ಞಾಪನದನ್ವಯ ಸಮರ್ಪಕವಾಗಿ ನಿರ್ವಹಿಸಬೇಕೆಂದು ಆದೇಶಿಸಲಾಗಿದೆ. ಪ್ರತಿಯೊಬ್ಬ ಮೌಲ್ಯಮಾಪಕರು ಪ್ರತಿ ದಿನಕ್ಕೆ 25 ಥಿಯರಿ ಉತ್ತರ ಪತ್ರಿಕೆ/30 ಡ್ರಾಯಿಂಗ್ ಉತ್ತರಪತ್ರಿಕೆಗಳನ್ನು ಉಲ್ಲೇಖ (8)ರ ಸುತ್ತೋಲೆಯಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ಮೌಲ್ಯಮಾಪನ ಮಾಡುವಂತೆ ತಿಳಿಸಲಾಗಿದೆ.

ಮಾನ್ಯ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರು ಒಟ್ಟು ಮೌಲ್ಯಮಾಪನ ಕಾರ್ಯದ ಮೇಲಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುವರು ಹಾಗೂ ನಿರ್ದೇಶಕರು (ತಾಂತ್ರಿಕ ಶಿಕ್ಷಣ), ಬೆಂಗಳೂರು ಇವರು ಮೇಲುಸ್ತುವಾರಿ ವಹಿಸುವರು.

ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇವರು ಮೌಲ್ಯಮಾಪನ ದಿನಗಳಲ್ಲಿ ಎಲ್ಲಾ ಮೌಲ್ಯಮಾಪನ ಕೇಂದ್ರಗಳಿಗೆ ಭೇಟಿ ನೀಡಿ ಮೌಲ್ಯಮಾಪನಕ್ಕೆ ಮಾಡಿರುವ ವ್ಯವಸ್ಥೆಯನ್ನು ಪರಿಶೀಲಿಸಿ ಯಾವುದೇ ಕುಂದು ಕೊರತೆ ಕಂಡು ಬಂದಲ್ಲಿ ಬಗೆಹರಿಸಲು ಕ್ರಮ ಕೈಗೊಂಡು ಮೌಲ್ಯಮಾಪಕರಿಗೆ ಸೂಕ್ತ ಮಾರ್ಗದರ್ಶನ ನೀಡಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಲಾಗಿದೆ.

ಶ್ರೀ ಹರೀಶ್.ಟಿ ಉಪ ನಿರ್ದೇಶಕರು (ಪರೀಕ್ಷೆ) ಮತ್ತು ಹಿರಿಯ ತಾಂತ್ರಿಕ ಸಹಾಯಕರುಗಳು ಕಾಲಕಾಲಕ್ಕೆ ಮೌಲ್ಯಮಾಪನ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕೆಂದು ತಿಳಿಸಲಾಗಿದೆ.

ವಿದ್ಯಾರ್ಥಿಗಳ ಫಲಿತಾಂಶಗಳನ್ನು ಶೀಘ್ರವಾಗಿ ನೀಡಲು ಅನುವಾಗುವಂತೆ, ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳಿಗೆ ಸಂಬಂಧಪಟ್ಟ ಮಾರ್ಕ್ಸ್‌ಲಿಸ್ಟ್‌ಗಳಿಂದ ಅಂಕಗಳನ್ನು ಕೀಯಿಂಗ್ ಮಾಡಿಸುವ ಸಂಬಂಧ ತಾಂತ್ರಿಕ ನೆರವಿಗಾಗಿ ಶ್ರೀ ಹರೀಶ ಶೆಟ್ಟಿ, ಪ್ರಾಚಾರ್ಯರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು, ಶ್ರೀ ಕೆ.ಮಹದೇವಯ್ಯ, ಗಣಕ ಕೇಂದ್ರ, ತಾಂ.ಪ.ಮಂ. ಶ್ರೀಮತಿ ಸುಷ್ಮ ಬಿ.ಹೆಚ್. ಪ್ರೊಗ್ರಾಮರ್ ಗಣಕ ಕೇಂದ್ರ, ತಾಂ.ಪ.ಮಂ. ಇವರುಗಳನ್ನು ಉಲ್ಲೇಖ (9)ರ ಅನ್ವಯ ಕೀಯಿಂಗ್ ಅಧಿಕಾರಿಗಳು ಸಂಪರ್ಕಿಸಲು ತಿಳಿಸಲಾಗಿದೆ.

ಸಂಸ್ಥೆಗಳಲ್ಲಿನ ಉಪನ್ಯಾಸಕರು ವಿಷಯ ಪರೀಕ್ಷಕರ ಸಮಿತಿ ಸದಸ್ಯ/ಅಧ್ಯಕ್ಷರು, ಪ್ರಶ್ನೆ ಪತ್ರಿಕೆ ರಚನಾಕಾರರು ಹಾಗೂ ಮುಖ್ಯ ಮೌಲ್ಯಮಾಪಕರಾಗಿದ್ದಲ್ಲಿ ಯಾವುದೇ ಕಾರಣಕ್ಕೂ ಅವರನ್ನು ಸಂಸ್ಥೆಯಲ್ಲಿ ಉಳಿಸಿಕೊಳ್ಳದೇ ಸಂಬಂಧಪಟ್ಟ ಮೌಲ್ಯಮಾಪನ ಕೇಂದ್ರಕ್ಕೆ ಬಿಡುಗಡೆಗೊಳಿಸತಕ್ಕದ್ದು. ಮೌಲ್ಯಮಾಪನ ಕಾರ್ಯಕ್ಕೆ ಗೈರು ಹಾಜರಾಗುವ ಉಪನ್ಯಾಸಕರ ಹಾಗೂ ಮೌಲ್ಯಮಾಪನಕ್ಕೆ ಬಿಡುಗಡೆಗೊಳಿಸದ ಪ್ರಿನ್ಸಿಪಾಲರ ವಿರುದ್ಧ ತಾಂತ್ರಿಕ ಪರೀಕ್ಷಾ ಮಂಡಳಿಯ ನಿಯಮಾವಳಿ, ಉಲ್ಲೇಖ (10) ರ ಸರ್ಕಾರಿ ಆದೇಶ ಮತ್ತು 1983 ರ ಶಿಕ್ಷಣ ಕಾಯ್ದೆ ನಿಯಮ 28ರ ಅಡಿಯಲ್ಲಿ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಲಾಗಿದೆ.

ನಿರ್ದೇಶಕರು

ಇವರಿಗೆ,

1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮುಂದಿನ ಕ್ರಮಕ್ಕಾಗಿ
2. ನೋಡಲ್ ಮೌಲ್ಯಮಾಪನ ಕೇಂದ್ರಗಳ ನೋಡಲ್ ಅಧಿಕಾರಿಗಳು/ಶಿಬಿರಾಧಿಕಾರಿಗಳು/ಸಹಾಯಕ ಶಿಬಿರಾಧಿಕಾರಿಗಳು/ ಮೌಲ್ಯಮಾಪನ ಶಿಬಿರ ಮೇಲ್ವಿಚಾರಕರು/ಕೀಯಿಂಗ್ ಅಧಿಕಾರಿಗಳು–ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ

ಪ್ರತಿ:
1) ಶ್ರೀ ಹರೀಶ ಶೆಟ್ಟಿ, ಪ್ರಾಚಾರ್ಯರು,ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು
2) ಶ್ರೀ ಕೆ.ಮಹದೇವಯ್ಯ, ಆ.ಶ್ರೇ.ಉ. ಗಣಕ ಕೇಂದ್ರ, ತಾಂ.ಪ.ಮಂ. ಬೆಂಗಳೂರು
3) ಶ್ರೀಮತಿ ಬಿ.ಹೆಚ್.ಸುಷ್ಮ, ಪ್ರೊಗ್ರಾಮರ್, ಗಣಕ ಕೇಂದ್ರ, ತಾಂ.ಪ.ಮಂ. ಬೆಂಗಳೂರು
4) ಮಾನ್ಯ ಆಯುಕ್ತರವರ ಆಪ್ತ ಶಾಖೆ
5) ನಿರ್ದೇಶಕರವರ ಆಪ್ತ ಶಾಖೆ
6) ಕಾರ್ಯದರ್ಶಿಯವರ ಆಪ್ತ ಶಾಖೆ
7) ಇ-ಆಡಳಿತ – ವೆಬ್ ಸೈಟ್ ನಲ್ಲಿ ಪ್ರಕಟಿಸಲು